ಶ್ರೀ ಅಬ್ದುಲ್ ಸಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು.)—

ಅ)	ಯೋಜನೆಯ ಹೆಸರು	ತೆಗೆದುಕೊಂಡಿರುವ ಒಟ್ಟು ಕಾಮಗಾರಿಗಳ್ಳ
	೧) ಎನ್‌ಆರ್‌ಇಪಿ (ಮೂಲ)	೨೩೯೮
	೨) ಎನ್‌ಆರ್‌ಇಪಿ (ಬರಗಾಲ)	೬೫
	೩) ಆರ್‌ಎಲ್‌ಇಜಿಪಿ	೧೩೦೦
	೪) ಡಿಪಿಎಪಿ	೭೬

ಆ)	ಯೋಜನೆಯ ಹೆಸರು	ಖರ್ಚು ಮಾಡಿದ ಮೊತ್ತ (ಲಕ್ಷ ರೂ.ಗಳಲ್ಲಿ)	ಪೂರ್ತಿಗೊಂಡ ಕಾಮಗಾರಿಗಳು
	೧) ಎನ್‌ಆರ್‌ಇಪಿ (ಮೂಲ)	೧೦೩.೬೩೫	೧೯೮
	೨) ಎನ್‌ಆರ್‌ಪಿ (ಬರಗಾಲ)	೭.೯೬೨	೫
	೩) ಆರ್‌ಎಲ್‌ಇಜಿಪಿ	೧೨೧.೦೧೨	೬೩೩
	೪) ಡಿಪಿಎಪಿ	೧೬.೬೪೦	೬

೩)	ಯೋಜನೆಯ ಹೆಸರು	ತೆಗೆದುಕೊಂಡಿರುವ ಕಾಮಗಾರಿಗಳು
	೧) ಎನ್‌ಆರ್‌ಇಪಿ (ಮೂಲ)	೧೦೩
	೨) ಎನ್‌ಆರ್‌ಇಪಿ (ಬರಗಾಲ)	೧೧
	೩) ಆರ್‌ಎಲ್‌ಇಜಿಪಿ	೧೩೫
	೪) ಡಿಪಿಎಪಿ	೧೫

ಈ.	ಯೋಜನೆಯ ಹೆಸರು	ಖರ್ಚು ಮಾಡಿದ ಮೊತ್ತ (ಲಕ್ಷ ರೂ.ಗಳಲ್ಲಿ)	ಪೂರ್ಣಗೊಂಡ ಕಾಮಗಾರಿಗಳು
	೧) ಎನ್‌ಆರ್‌ಇಪಿ (ಮೂಲ)	೨೦.೯೯೦	೩
	೨) ಎನ್‌ಆರ್‌ಇಪಿ(ಬರಗಾಲ)	೧.೪೩೦	೫
	೩) ಆರ್‌ಎಲ್‌ಇಜಿಪಿ	೮.೩೮೪	೯೭
	೪) ಡಿಪಿಎಪಿ	೧.೭೯೦	೧

ಜೈವಿಕ ಅನಿಲಯಂತ್ರ ಸ್ಥಾಪನೆ

೫೬೬. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷ ಎಷ್ಟು ಜೈವಿಕ ಅನಿಲ ಯಂತ್ರಗಳನ್ನು ಸ್ಥಾಪಿಸಲಾಗಿದೆ ?

ಆ) ಉತ್ತರಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷ ಎಷ್ಟು ಜೈವಿಕ ಅನಿಲಯಂತ್ರಗಳನ್ನು ಸ್ಥಾಪಿಸಲಾಗಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೆಳಗೆ ತಿಳಿಸಿದಂತೆ ಪ್ರಗತಿ ಸ್ಥಾಪಿಸಲ್ಪಟ್ಟಿದೆ.

೧೯೮೪-೮೫	೩೫೫೩
೧೯೮೫-೮೬	೬೧೬೮
೧೯೮೬-೮೭	೯೦೯೮

ಆ) ಉತ್ತರಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೆಳಗೆ ತಿಳಿಸಿದಂತೆ ಪ್ರಗತಿ ಸ್ಥಾಪಿಸಲ್ಪಟ್ಟಿದೆ.

೧೯೮೪-೮೫	೨೨೬
೧೯೮೫-೮೬	೧೯೦
೧೯೮೬-೮೭	೫೦೬

ಹರಪನಹಳ್ಳಿ ತಾಲ್ಲೂಕಿನಲ್ಲಿ ವಸತಿ ಗೃಹ ಸೌಲಭ್ಯ

೬೫೯. ಶ್ರೀ ಬಿ. ಹೆಚ್. ಯಂಕನಾಯಕ್ (ಹರಪನಹಳ್ಳಿ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ನೇ ಸಾಲಿನಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿ ನಿರ್ಮಾಣಗೊಂಡಿರುವ ಜನತಾ ಗೃಹಗಳ ಸಂಖ್ಯೆ ಎಷ್ಟು ?

ಆ) ವಸತಿಹೀನರ ಒಟ್ಟು ಸಂಖ್ಯೆ ಎಷ್ಟು ?

ಇ) ಅವರಿಗೆ ವಸತಿಗಳನ್ನು ಪೂರೈಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).—

ಅ) ೧೯೮೬-೮೭ನೇ ಸಾಲಿಗೆ ೧೯೦ ಜನತಾ ಮನೆಗಳನ್ನು ಮಂಜೂರು ಮಾಡಲಾಗಿದ್ದು ನಿರ್ಮಾಣ ವಿವಿಧ ಹಂತಗಳಲ್ಲಿವೆ.

ಆ) ೩೭೬೮.

ಇ) ರಾಜ್ಯದ ಪ್ರತಿಯೊಂದು ಜಿಲ್ಲೆಯ ಬೇಡಿಕೆಗಳ ಅನುಗುಣವಾಗಿ ಸರ್ಕಾರದ ಜನತಾ ಮನೆಗಳಿಂ ಕಡಿಮೆ ವೆಚ್ಚದ ಮನೆಗಳನ್ನು ಮಂಜೂರು ಮಾಡುತ್ತಿದೆ.

ಜಿಲ್ಲಾ ಪರಿಷತ್‌ಗಳಿಗೆ ಮಾಡಲಾದ ವೆಚ್ಚ

೬೫೧. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿಲ್ಲಾ ಪರಿಷತ್, ಮಂಡಲ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದ ನಂತರ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಪ್ರವಾಸ, ಪೀಠೋಪಕರಣ, ಕಚೇರಿ ಮತ್ತು ವಾಸದ ಮನೆಗಳಿಗಾಗಿ ಮಾಡಲಾದ ವೆಚ್ಚವೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್. (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ವಿವರಣೆಯನ್ನು 'ಅ' ಪಟ್ಟಿಯಲ್ಲಿ ಒದಗಿಸಲಾಗಿದೆ.